

# ಹೆರ್ರಿಂಗ್ ಬೋನ್ ಕ್ವಿಲ್ಟ್

*ಈ ಟುಟೋರಿಯಲಲ್ಲಿ ನಾವು ಹೆರ್ರಿಂಗ್ ಬೋನ್ ಕ್ವಿಲ್ಟಿಂಗ್ ಪ್ಯಾಟರ್ನ್ ಹೇಗೆ ಮಾಡುವುದೆಂದು ಕಲಿಯುತ್ತೀರ.*


















**ವಸ್ತುಗಳ ವಿವರ**

4 ಪ್ರಿಂಟೆಡ್ ಬಟ್ಟೆ ಒಂದೊಂದು ½ ಮೀಟರ್. ಬಟ್ಟೆಯ ಅಳತೆ ಕ್ವಿಲ್ಟಿನ ಉದ್ದ ಮತ್ತು ಅಗಲದ ಮೇಲೆ ಅವಲಂಬಿತವಾಗಿರುತ್ತದೆ.
1 ಮೀಟರ್ ಪ್ಲೇನ್ ಬಟ್ಟೆ
ಕಟ್ಟಿಂಗ್ ಮ್ಯಾಟ್
ಕ್ವಿಲ್ಟಿಂಗ್ ರೂಲರ್
ರೋಟರಿ ಫ್ಯಾಬ್ರಿಕ್ ಕಟ್ಟರ
ಐರನ್
ದಾರ
ಬೀಡೆಡ್ ಪಿನ್ಸ್
ಮತ್ತು ಕತ್ತರಿ

ನಾವೀಗ ಹೆರ್ರಿಂಗ್ ಬೋನ್ ಕ್ವಿಲ್ಟ್ ಪ್ಯಾಟರ್ನ್ ಮಾಡುತ್ತಿದ್ದೇವೆ. ಇದು 29 ಇಂಚು ಉದ್ದ ಮತ್ತು 24.25 ಇಂಚು ಅಗಲದ್ದಾಗಿರುತ್ತದೆ.

ಇದಕ್ಕೆ ನಮಗೆ ಬೇಕಾಗಿರುವುದು
8x8 ಇಂಚು ಅಳತೆಯಿರುವ ಎರಡು ಚೌಕಾಕಾರದ ಪ್ರಿಂಟೆಡ್ ಬಟ್ಟೆ
8x8 ಇಂಚು ಅಳತೆಯಿರುವ ಎಂಟು ಚೌಕಾಕಾರದ ಪ್ಲೇನ್ ಆರೆಂಜ್ ಬಟ್ಟೆ

ಈ ರೀತಿಯ ಪರಿಪೂರ್ಣವಾದ ಚೌಕವನ್ನು ಕಟ್ ಮಾಡಲು ನಮ್ಮ ವೆಬ್ ಸೈಟ್ www.ushasew.com ಗೆ ಹೋಗಿ ಚೆವ್ರಾನ್ ಕ್ವಿಲ್ಟ್ ವೀಡಿಯೋವನ್ನು ನೋಡಬಹುದು.


ಕ್ವಿಲ್ಟಿಂಗ್ ಎಂದರೆ ಬ್ಲಾಕ್ ಗಳನ್ನು ಸೃಷ್ಟಿಸುವುದು ಮತ್ತು ಅದನ್ನು ಪುನರಾವರ್ತಿಸುವುದು. ಈಗ ಇದನ್ನು ಮೊದಲ ಬ್ಲಾಕ್ ಇಂದ ಶುರು ಮಾಡೋಣ. ನಾವು ಆರೆಂಜ್ ಬಟ್ಟೆಯನ್ನು ಉಪಯೋಗಿಸೋಣ ಮತ್ತು ಪ್ರಿಂಟೆಡ್ ಬಟ್ಟೆಯನ್ನು ಉಪಯೋಗಿಸೋಣ.

ಆರೆಂಜ್ ಬಟ್ಟೆಯನ್ನು ಬಲಭಾಗ ಬಲಭಾಗವನ್ನು ಕಾಣುವಂತೆ ಪ್ರಿಂಟೆಡ್ ಬಟ್ಟೆಯ ಮೇಲೆ ಇಡಬೇಕು. ನಾವು ಪೂರ್ತಿ ಚೌಕದ ಸುತ್ತಾ ಇಲ್ಲಿ ತೋರಿಸಿದಂತೆ ಹೊಲೆಯುತ್ತೇವೆ. ಬೀಡೆಡ್ ಪಿನ್ ಸಹಾಯದಿಂದ ಎರಡೂ ಬಟ್ಟೆಯನ್ನು ಪಿನ್ ಮಾಡಿ. ಹೊಲೆಯಲು ಪ್ರಾರಂಭಿಸೋಣ.

ಬಟ್ಟೆಯನ್ನು ಉಷಾ ಜನೋಮ್ ಮೆಮೋರಿ ಕ್ರಾಫ್ಟ್ 6700 P ಕ್ವಿಲ್ಟಿಂಗ್ ಮಷೀನ್ ಹತ್ತಿರ ತೆಗೆದುಕೊಂಡು ಹೋಗೋಣ. ನಾವು ಮಷೀನನ್ನು ಈಗಾಗಲೇ HP ಫುಟ್ ಮತ್ತು ಅದರೊಂದಿಗೆ HP ಪ್ಲೇಟಿನೊಂದಿಗೆ ತಯಾರಾಗಿಟ್ಟಿದ್ದೇವೆ. HP ಫುಟ್ ಮತ್ತು ಪ್ಲೇಟ್ನಿಂದ ಪರಿಪೂರ್ಣವಾದ ಹೊಲಿಗೆ ಮತ್ತು ಪರಿಪೂರ್ಣವಾದ ಪ್ರಾರಂಭವನ್ನುಎಲ್ಲಾ ತರಹದ ಬಟ್ಟೆಗೆ ಸುಲಭವಾಗುತ್ತದೆ. ಮಷೀನನ್ನು ನೇರ ಹೊಲಿಗೆಗೆ ಸೆಟ್ ಮಾಡಿ ಮತ್ತು ಚೌಕದ ಸುತ್ತಾ ಹೊಲೆಯಲು ಪ್ರಾರಂಭಿಸಿ. ಇದು ಕರ್ವ್ ಮತ್ತು ನಿಖರವಾದ ಟಾಪ್ ಹೊಲಿಗೆಗೆ ಇದು ಸೂಕ್ತವಾಗಿದೆ.ಒಂದು ಬದಿಯ ತುದಿ ತಲುಪಿದಾಗ ಮಷೀನನ್ನು ನಿಲ್ಲಿಸಿ, ಸೂಜಿಯನ್ನು ಮೇಲಕ್ಕೆತ್ತಿ ಬಟ್ಟೆಯನ್ನು ತಿರುಗಿಸಿ ಮತ್ತೆ ಹೊಲೆಯಲು ಪ್ರಾರಂಭಿಸಿ. ಇದೇ ವಿಧಾನವನ್ನು ಚೌಕದ ಎಲ್ಲಾ ಕಡೆನೂ ಹೊಲೆಯುವವರಗೂ ಮುಂದುವರಿಸಿ. ಒಮ್ಮೆ ಎಲ್ಲಾ ಕಡೆನೂ ಹೊಲಿದ ಮೇಲೆ ಪಿನ್ ಗಳನ್ನು ತೆಗೆಯಿರಿ ಮತ್ತು ಮುಂದಿನ ಹಂತಕ್ಕೆ ಹೋಗೋಣ.




ನಿಮ್ಮ ಹೊಲಿಗೆ ಹೀಗೆ ಕಾಣಬೇಕು. ನಾವು ಈಗ ಚೌಕವನ್ನು ನಾಲ್ಕು ತ್ರಿಕೋನಾಕಾರವಾಗಿ ಭಾಗಮಾಡಬೇಕು. ಕ್ವಿಲ್ಟಿಂಗ್ ರೂಲರನ್ನು ತೆಗೆದುಕೊಂಡು ಇದನ್ನು ಡಯಾಗ್ನಲ್ ಆಗಿ ಇಲ್ಲಿ ತೋರಿಸಿರುವಂತೆ ಇಡಬೇಕು. ಚೌಕದ ಅಡ್ಡಲಾಗಿ ರೋಟರಿ ಫ್ಯಾಬ್ರಿಕ್ ಕಟ್ಟರ್ ಸಹಾಯದಿಂದ ಕತ್ತರಿಸಿ. ಇದೇ ವಿಧಾನವನ್ನು ಇನ್ನೊಂದು ಕಡೆನೂ ಅನುಸರಿಸಿ.





ಇದು ನಮಗೆ ನಾಲ್ಕು ತ್ರಿಕೋನಾಕಾರವನ್ನು ಕೊಡುತ್ತದೆ. ಒಂದೊಂದು ತ್ರಿಕೋನಾಕಾರಕ್ಕೂ ಒಂದು ಹೊಲೆದಿರುವ ಗೆರೆ ತುದಿಯಲ್ಲಿರುತ್ತದೆ.






ನಾವೀಗ ಇದೇ ವಿಧಾನವನ್ನು ಎಲ್ಲಾ ಪ್ರಿಂಟೆಡ್ ಚೌಕಕ್ಕೂ ಪುನರಾವರ್ತಿಸಬೇಕು. ಇದನ್ನು ಹೊಲೆದು ಡಯಾಗ್ನಲ್ಲಾಗಿ ಕತ್ತರಿಸಿ 4 ತ್ರಿಕೋನಾಕಾರ ಪ್ರಿಂಟೆಡ್ ಬಟ್ಟೆ ವೀಡಿಯೋದಲ್ಲಿ ತೋರಿಸಿರುವಂತೆ ಇರಬೇಕು.




ಮುಂದಿನ ಹಂತ ಐರನ್ ಮಾಡುವುದು. ತ್ರಿಕೋನಾಕಾರವನ್ನು ತೆಗೆದುಕೊಂಡು ಅದನ್ನು ತೆರೆಯಿರಿ. ಸೀಮ್ ಲೈನನ್ನು ಸರಿಯಾಗಿ ಐರನ್ ಮಾಡಿ, ಸೀಮನ್ನು ಚಪ್ಪಟೆ ಮಾಡಿ ಮತ್ತು ಬ್ಲಾಕಿಗೆ ನೀಟಾದ ಫಿನಿಷ್ ಕೊಡಬೇಕು. ನಾವು ಇದೇ ವಿಧಾನವನ್ನು ತೆರೆಯುವ ಭಾಗ, ಸರಿಯಾದ ಬಟ್ಟೆಯ ಭಾಗವನ್ನುಐರನ್ ಮಾಡುವುದನ್ನು ಎಲ್ಲಾ ತ್ರಿಕೋನಾಕಾರಕ್ಕೂ ಮಾಡಬೇಕು.




ಐರನಿಂಗ್ ಮುಗಿಸಿದ ನಂತರ ನಮಗೆ ಬೇಕಾಗಿರುವುದು ಕತ್ತರಿ. ಹೆಚ್ಚಾಗಿರುವ ಬಟ್ಟೆಯ ಬಾಗ ಈಚೆ ಬಂದಿರುವುದರಿಂದ ಅದನ್ನು ಟ್ರಿಮ್ ಮಾಡಿ ಚೌಕಕ್ಕೆ ಪರಿಪೂರ್ಣವಾದ  ಫಿನಿಷ್ ಕೊಡಲು ಕತ್ತರಿಸಬೇಕು. ಚೌಕದ ಎರಡೂ ಬದಿಯಲ್ಲಿ ಕತ್ತರಿಸಿರುವುದನ್ನು ಖಚಿತಪಡಿಸಿಕೊಳ್ಳಿ, ಇದೇ ವಿಧಾನವನ್ನು ಎಲ್ಲಾ ತಯಾರಾದ ಚೌಕದ ಸುತ್ತಲೂ ಪುನರಾವರ್ತಿಸಿ. ಪರಿಪೂರ್ಣವಾಗಿದೆ!



ನಮ್ಮ ಹತ್ತಿರ ಚೌಕಗಳು ತಯಾರಾಗಿದೆ, ಈಗ ಪ್ಯಾಟರ್ನ ನ ಕೆಲಸ ಮಾಡೋಣ. ವೀಡಿಯೋದಲ್ಲಿ ತೋರಿಸಿರುವಂತೆ ಚೌಕಗಳನ್ನು ಜೋಡಿಸಿ.ನಾವು ಮೊದಲು ಒಂದು ಪ್ರಿಂಟನ್ನು ಇಡೋಣ. ಆರೆಂಜ್ ಸ್ಟ್ರಿಪಿನ ಒಂದು ಚೌಕಕ್ಕೆ ಆರೆಂಜ್ ಸ್ಟ್ರಿಪಿನ ಇನ್ನೊಂದು ಚೌಕಕ್ಕೆ ಮ್ಯಾಚ್ ಮಾಡಿ. ಎರಡನೇ ಪ್ರಿಂಟೆಡ್ ಬಟ್ಟೆಯ  ಒಂದು ಚೌಕಕ್ಕೆ ಮೂರನೇ ಪ್ರಿಂಟೆಡ್ ಬಟ್ಟೆಯ ಚೌಕವನ್ನು ಮ್ಯಾಚ್ ಮಾಡಿ.ಒಂದೇ ಪ್ರಿಂಟಿರುವ ಚೌಕವನ್ನು ಜೋಡಿಸಿದ್ದೀರಾ ಎಂದು ಖಾತ್ರಿಮಾಡಿಕೊಳ್ಳಿ ಇದು ಡಯಾಗ್ನಲ್ ಲೈನ್ ಮಾಡಲು ಸಹಾಯವಾಗುತ್ತದೆ.ಮೂರನೇ ಚೌಕದ ಪ್ಲೇನ್ ಸ್ಟ್ರಿಪನ್ನು ನಾಲ್ಕನೇ ಚೌಕದ ಪ್ಲೇನ್ ಸ್ಟ್ರಿಪಿಗೆ ಮ್ಯಾಚ್ ಮಾಡಿ ಮತ್ತು ನಾಲ್ಕನೆ ಪ್ರಿಂಟೆಡ್ ಬಟ್ಟೆಯ ಸ್ಟ್ರಿಪನ್ನು ಐದನೆ ಪ್ರಿಂಟೆಡ್ ಬಟ್ಟೆಯ ಸ್ಟ್ರಿಪ್ಪಿಗೆ ಮ್ಯಾಚ್ ಮಾಡಿ.ಇದು ಸುಲಭ. ಇದು ಸಮವಾಗಿದೆಯೇ ಎಂದು ಖಾತ್ರಿಪಡಿಸಿಕೊಳ್ಳಿ




ಪ್ರೆಸ್ಸರ್ ಫುಟಿನ ಕೆಳಗೆ ಒಂದು ಚೌಕದ ಕೊನೆಯನ್ನು ಅಲೈನ್ ಮಾಡಿ. ನೇರ ಹೊಲಿಗೆಯನ್ನು ಮೇಲಿನಿಂದ ಕೆಳಗಿನವರೆಗೂ ಹೊಲೆಯಿರಿ. ದಾರವನ್ನು ಕತ್ತರಿಸಿ. ಪ್ರೆಸ್ಸರ್ ಫುಟನ್ನು ಮೇಲಕ್ಕೆತ್ತಿ . ಈಗ ಇನ್ನೊಂದು ಚೌಕದ ಕೆಲಸ. ಇದೇ ವಿಧಾನವನ್ನು ಅನುಸರಿಸಿ.



ನಿಮ್ಮ ಚೌಕಗಳು ಒಟ್ಟಿಗೆ ಹೊಲಿದ ನಂತರ ಹೀಗೆ ಕಾಣಬೇಕು.ಇಲ್ಲಿ ತೋರಿಸಿರುವಂತೆ ಮೊದಲ ಜೊತೆಯ ಹೊಲೆದಿರುವ ಚೌಕವನ್ನು ಎರಡನೆಯ ಹೊಲಿದಿರುವ ಚೌಕದ ಪಕ್ಕದಲ್ಲಿ ಇಡಬೇಕು. ಹೆರ್ರಿಂಗ್ ಬೋನ್ ಪ್ಯಾಟರ್ನ್ ಅದರ ಜಾಗದಲ್ಲಿ ಇದೆಯೇ ಎಂದು ಪರಿಶೀಲಿಸಿ ಮತ್ತು ಅದು ತಲಕೆಳಗಾಗಿಲ್ಲಾ ಎಂದು ಖಚಿತಪಡಿಸಿಕೊಳ್ಳಿ



ಮೊದಲ ಹೊಲೆದಿರುವ ಚೌಕವನ್ನು ಎರಡನೆಯ ಹೊಲೆದಿರುವ ಚೌಕದ ಮೇಲೆ ಬಲಭಾಗ ಮೇಲೆ ಬರುವಂತೆ ಇಡಬೇಕು. ನಾವೀಗ ಈ ಎರಡೂ ಜೊತೆಯನ್ನು ಒಟ್ಟಿಗೆ ಸೇರಿಸುತ್ತೇವೆ.

ಚೌಕದ ಎದಭಾಗದ ತುದಿಯನ್ನು ಪ್ರೆಸ್ಸರ್ ಫುಟಿನ ಕೆಳಗೆ ಇಟ್ಟು ನೇರವಾದ ಹೊಲಿಗೆಯನ್ನು ಹಾಕಬೇಕು. ಇದಾದ ನಂತರ ದಾರವನ್ನು ಕತ್ತರಿಸಿ. ಹೊಲೆದಿರುವ ಪೀಸನ್ನು ತೆರೆಯಿರಿ ಮತ್ತು ಅದನ್ನು ತಿರುಗಿಸಿ. ಈಗ ಒಂದು ಚೌಕದ ಬಟ್ಟೆಯ ಸರದಿ. ಪೀಸನ್ನು ತೆಗೆದುಕೊಂಡು ಅದನ್ನು ಬಟ್ಟೆಯ ಡಿಸೈನಿಗೆ ಮ್ಯಾಚ್ ಮಾಡಬೇಕು. ಒಂದು ಚೌಕವನ್ನು ತೆಗೆದುಕೊಂಡು ಬಲಭಾಗ ಬಲಭಾಗವನ್ನು ನೋಡುವಂತೆ ಹೊಲೆದಿರುವ ಸಲಿನಲ್ಲಿ ಇಡಬೇಕು ನಂತರ ನೇರ ಹೊಲಿಗೆಯನ್ನು ತುದಿಗೆ ತೋರಿಸಿರುವಂತೆ ಹಾಕಬೇಕು.





ನಮ್ಮ ಮೊದಲ ಸಾಲು ತಯಾರಾಗಿದೆ. ಹೊಲಿಗೆ ಬಟ್ಟೆಯ ಬಲಭಾಗದಿಂದ ಹೀಗೆ ಕಾಣಬೇಕು ಮತ್ತು ಅದನ್ನು ಸುತ್ತಲೂ ತಿರುಗಿಸಿದಾಗ ಸೀಮ್ ನೋಡಲು ಹೀಗೆ ಕಾಣಬೇಕು. ನಾವೀಗ ಸೀಮ್ ಅಲೂಯನ್ಸನ್ನು ಬೆರಳಿನ ಸಹಾಯದಿಂದ ತೆಗೆದು ಅದನ್ನು ಚಪಟ್ಟೆ ಮಾಡಿ ಐರನ್ ಮಾಡಬೇಕು. ಬೆರಳಿನ ಬಗ್ಗೆ ಜಾಗ್ರತೆಯಿಂದಿರಿ ಏಕೆಂದರೆ ಬಿಸಿ ಐರನನ್ನು ಬಳಸುತ್ತಿದ್ದೀರ. ಪ್ರತಿಯೊಂದು ಸೀಮನ್ನು ಚಪಟ್ಟೆ ಮಾಡಬೇಕು.

ಪ್ರಾರಂಭಮಾಡಿರುವುದರಿಂದ ನಾವು ಇದಕ್ಕೆ ಪ್ಲೇನ್ ಆರೆಂಜ್ ಬಟ್ಟೆಯಿಂದ ಎರಡನೇ ಸಾಲನ್ನು ಪ್ರಾರಂಭಿಸೋಣ. ವೀಡಿಯೋದಲ್ಲಿ ತೋರಿಸಿರುವಂತೆ ಪ್ರಿಂಟ್ ಇರುವುದನ್ನು ಪ್ರಿಂಟ್ ಇರುವುದಕ್ಕೆ ಮತ್ತು ಪ್ಲೇನ್ ಇರುವುದನ್ನು ಪ್ಲೇನ್ ಇರುವುದಕ್ಕೆ ಮ್ಯಾಚ್ ಮಾದಬೇಕು. ಎರಡನೇ ಸಲಿನ ಎಲ್ಲಾ ಪೀಸ್ ಗಳನ್ನು ಜೋಡಿಸಿ. ಇಲ್ಲಿ ಪಾಯಿಂಟ್ ಮಾಡಿರುವಂತೆ ಪ್ಯಾಟರ್ನ್ಗಳು ಹೀಗಿದೆ ಎಂದು ನೋಡಿ, ಇದು ಒಂದೇ ಲೈನಲ್ಲಿ ಇಲ್ಲಾ ಆ ಲೈನ್ ಮುರಿದಿದೆ. ಇದೇ ಹೆರ್ರಿಂಗ್ ಬೋನ್ ಪ್ಯಾಟರ್ನ್.



ಮೊದಲ ಸಾಲಿನ ರೀತಿಯಲ್ಲೇ ನಾವು ಎರಡನೇ ಸಲನ್ನು ಹೊಲೆಯಬೇಕು. ಮೊದಲ ಚೌಕವನ್ನು ಎರಡನೆಯ ಚೌಕದ ಮೇಲೆ , ಮೂರನೇ ಚೌಕವನ್ನು ನಾಲ್ಕನೆಯ ಚೌಕದ ಮೇಲಿಡಬೇಕು. ಬಟ್ಟೆಯನ್ನು ಒಟ್ಟಿಗೆ ಪಿನ್ ಮಾಡಿ ಮೊದಲು ಮಾಡಿದಂತೆ ಹೊಲೆಯಬೇಕು.


ನಾವೀಗಾಗಲೇ ಈ ಸಾಲನ್ನು ಹೊಲೆದು ಸೀಮ್ ಅಲೋಯನಸ್ನು ಐರನ್ ಮಾಡಿದೇವೆ. ಇದು ಹೀಗೆ ಕಾಣಬೇಕು. ಪ್ಯಾಟರ್ನ್ ಸರಿಯಾಗಿದೆಯೇ ಮತ್ತು ನೀವು ಎಲ್ಲಾ ಚೌಕವನ್ನು ಸರಿಯಾದ ಕ್ರಮದಲ್ಲಿ ಹೊಲೆದಿದ್ದೀರ ಎಂದು ಖಾತ್ರಿಮಾಡಿಕೊಳ್ಳಿ






ಈ ಎರಡೂ ಸಾಲನ್ನು ಒಟ್ಟಿಗೆ ಸೇರಿಸೋಣ. ಮೇಲ್ಭಾಗದ ಸಾಲನ್ನು ಕೆಳಭಾಗದ ಸಾಲಿನ ಮೇಲಿಡಬೇಕು. ಬಲಭಾಗ ಬಲಭಾಗವನ್ನು ಕಾಣುವಂತಿರಬೇಕು. ಸೀಮ್ ಲೈನ್ ಮ್ಯಾಚ್ ಆಗಿದೆಯೇ ನೋಡಿಕೊಂಡು ಇದನ್ನು ಸರಿಯಾದ ಜಾಗದಲ್ಲಿ ಪಿನ್ ಮಾಡಿ. ಎಲ್ಲಾ ಸೀಮ್ ಅಲೋಯನಸ್ನು ಬಟ್ಟೆ ಭದ್ರವಾಗಿ ಹಿಡಿದುಕೊಳ್ಳಲು ಪಿನ್ ಮಾಡಿ. ನಾವೀಗ ಪಿನ್ ಮಾಡಿರುವ ಭಾಗದಲ್ಲಿ ಹೊಲೆಯಬೇಕು.





ಬಟೆಯ ತುದಿಯನ್ನು ಪ್ರೆಸ್ಸರ್ ಫುಟಿನ ಕೆಳಗೆ ಇಟ್ಟು ಹೊಲೆಯಲು ಪ್ರಾರಂಭಿಸಿ. ಚೌಕದ ಒಂದು ತುದಿಗೆ ಬಂದಾಗ ನಿಲ್ಲಿಸಿ ಪಿನ್ ನನ್ನು ತೆಗೆದು ಸೀಮ್ ಅಲೂಯನ್ಸಿನ ಎರಡೂ ತುದಿಯನ್ನು ಚಪಟ್ಟೆ ಮಾಡಬೇಕು. ಹೊಲಿಗೆಗಳು ಚಪ್ಪಟ್ಟೆಮಾಡಿರುವ ಸೀಮ್ ಅಲೋಯನ್ಸಿನ ಎರಡೂ ತುದಿಯಲ್ಲಿ ಹಾಕಬೇಕು. ನಿಲ್ಲಿಸಿ ನಿಲ್ಲಿಸಿ ಪಿನ್ ಗಳನ್ನು ತೆಗೆಯುತ್ತಾ ಹೋಗಿ ಮತ್ತು ಸೀಮ್ ಅಲೋಯನಸ್ನು ಚಪ್ಪಟೆ ಮಾಡುತ್ತಾ ಹೋಗಬೇಕು. ಮತ್ತು ಬಟ್ಟೆಯ ತುದಿಯವರೆಗೂ ಹೊಲೆಯಬೇಕು.
ನಿಮ್ಮ ಎರಡೂ ಸಾಲುಗಳೂ ಈಗ ಇಟ್ಟಿಗೆ ಹೊಲೆಯಲಾಗಿದೆ. ಇದು ಬಲಭಾಗದಿಂದ ಮತ್ತು ಹಿಂಭಾಗದಿಂದ ಹೀಗೆ ಕಾಣಬೆಕು. ಈಗ ಸಾಲುಗಳನ್ನು ಬಲಭಾಗದ ಮೇಲೆ ತಿರುಗಿಸಿ.









ಕಟ್ಟಿಂಗ್ ಮ್ಯಾಟಿನ ಮೇಲಕ್ಕೆ ಇದನ್ನು ಜೋಡಿಸಿ. ನಾವು ಇನ್ನೂ ಎರಡು ಸಾಲನ್ನು ಇದೇ ರೀತಿ ಮಾಡಿದ್ದೇವೆ. ಇದನ್ನು ಒಂದರ ಕೆಳಗೆ ಇನ್ನೊಂದನ್ನು ಇಡಬೇಕು. ಪ್ಯಾಟರ್ನ್ ಹೇಗೆ ಕಾಣುತ್ತದೆ ಎಂದು ನೋಡಿ. ಪ್ಲೇನ್ ಆರೆಂಜ್ ಸ್ಟ್ರಿಪ್ ಯಾವಾಗಲೂ ಪ್ರಿಂಟೆಡ್ ಸ್ಟ್ರಿಪನ್ನು ಮ್ಯಾಚ್ ಮಾಡುತ್ತದೆ. ನಾವು ಈ ಎಲ್ಲಾ ಮೂರು ಪೀಸಸನ್ನು ಒಟ್ಟಿಗೆ ಸೇರಿಸುತ್ತೇವೆ ನಮ್ಮ ಅಂತಿಮ ಕ್ವಿಲ್ಟನ್ನು ಮಾಡಲು. ಇದನ್ನು ಬಲಭಾಗ ಬಲಭಾಗವನ್ನು ನೋಡುವಂತೆ ಇಡಬೇಕು, ಸೀಮ್ಸನ್ನು ಮ್ಯಾಚ್ ಮಾಡಬೇಕು ಮತ್ತು ಮೇಲ್ಭಾಗ, ಕೆಳಭಾಗ ಮತ್ತು ಮಧ್ಯಭಾಗವನ್ನು ಪಿನ್ ಮಾಡಬೇಕು. ನಾವು ಎರಡೇ ಹೊಲಿಗೆಯ ಗೆರೆಯನ್ನು ಹಾಕಬೇಕು. ಒಂದು ಮಧ್ಯಭಾಗದ ಮೇಲೆ ಮತ್ತು ಇನ್ನೊಂದು ಮಧ್ಯಭಾಗದ ಕೊನೆಯಲ್ಲಿ.

ಇಷ್ಟೇ ಆಯಿತು! ನೀವು ನಿಮ್ಮ ಮೊದಲ ಹೆರ್ರಿಂಗ್ ಬೋನ್ ಕ್ವಿಲ್ಟನ್ನು ತಯಾರಿಸಿದ್ದೀರ. ಸೃಜನಶೀಲರಾಗಿ, ವಿವಿಧ ಬಣ್ಣದ ಸಂಯೋಜನೆಯನ್ನು ಬಳಸಿ ಅದನ್ನು ಅದ್ಭುತವಾಗಿ ಕಾಣುವಂತೆ ಮಾಡಿ. ಇದು ನಿಮ್ಮ ಮಂಚಕ್ಕೆ ಸುಂದರವಾದ ಸೃಷ್ಟಿ ಅಥವಾ ಇದು ಗೋಡೆಯ ಮೇಲೆ ಒಂದು ಚೆಂದದ ಚಿತ್ತಾರವಾಗಿ ಉಪಯೋಗಿಸಬಹುದು.